Lahari **Communique**

NEWS LETTER FOR PRIVATE CIRCULATION AMONG THE LEGAL FRATERNITY

Volume 13 | December 2001 | Part 9

## Court Vacations

☐ The High Court of Karnataka and all its subordinate courts will be closed during the following vacations:

Summer Vacation :
April 22 to May 24, 2002

Dasara Vacation :
October 16 to 18, 2002

Winter Vacation :
December 23 to 31, 2002

☐ The Supreme Court of India will be closed during the following vacations :

New year holidays :
January 1 to 4, 2002

Summer vacation :
May 13 to July 7, 2002

Dussehra Holidays :
October 14 to 19, 2002

Christmas and Newyear's *Holidays* :
December 23, 2002
to January 3, 2003

## Rent Act comes into force

By a notification dated 5.12.2001 the State Government has issued a notification under Section 1 (3) of the Karnataka Rent Act, 1999 declaring that the Act would come into force with effect from 31.12.2001.

## Assent Given

During the last week of December 2001 President K. R. Narayanan has given his assent to the Karnataka Control of Organised Crime Bill, 2002 which intends to combat organised crime which is posing a serious threat to the society.

## ILR Subscription

Subscription for 2002 for Indian Law Reports (Karnataka Series) has been fixed at Rs. 450 for despatch by certificate of posting and Rs. 926 for despatch by registered post. Subscription can be paid in cash or Demand Draft favouring the Secretary, Karnataka Law Reporting Council, old KGID Building, Bangalore - 560 001.

## Major Victory

The Income Tax appellate Tribunal, Indore Bench, by its order dated 30th October, 2001 has partly allowed ITA No. 604/Bang/2000 (AY 1997-98) filed by the Bangalore Advocates' Co-op. Society Ltd. against the order dated 18.7.2000 passed by the Joint Commissioner of Income Tax (Asstt) S.R., VI, Bangalore. The Tribunal has upheld that the claim of the society that it is entitled to tax exemption in respect of 1% of the commission collected on the sale of non-judicial stamp papers as the same is indeed the contribution of the state government towards the Building Fund setup for the construction of Bangalore Advocates Association building and directing the assessment authority to reasses the tax liability in the light of this position. This major victory before the Appellate Tribunal is bound to result in substantial Income Tax saving to the society.

## Fast Track Courts

A total number of 1,734 fast track courts are set up at the instance of the Government of India under a wholly centrally-funded scheme. It is aimed at expeditiously clear the colossal scale of pendency in the district and subordinate courts under a time-bound programme.

The fast track courts are expected to substantially reduce the number of under-trials in jails. An estimated 1.8 lakh under-trials are languishing in various jails in the country. The State Governments are spending an aggregate of over Rs. 361 crore per annum on the imprisoned under-trials at the rate of Rs. 55 per day. Besides, the expeditious disposal of cases relating to under trials will address a serious human rights problem.

According to an official figure, the total number of cases pending in the nearly 13,000 district and subordinate courts in the country is 2.4 Crore. The 21 High Courts account for over 34 lakh pending cases. Over 10% of these are more than 10 years old.

Under the government's action plan the fast track courts will take up as their next priority sessions cases pending for 2 years or more, particularly in which the accused persons have been on bail. What made the scheme feasible was the outright grant of Rs. 502.90 crore by the Eleventh Finance Commission for the creation of 1,734 additional courts.

## Commission of Jurists

In the annual general body meeting of the Karnataka State Commission of jurists held on December 8, 2001 the following office bearers for the year 2001-02 were elected :

Mr. Justice (Rtd) P. P. Bopanna : President Emiritus; Mr. A. N. Jayaram : President; Mr. S.S. Nagananda and Mr. K. Kasturi - Vice Presidents; Mr. P.G.C. Chengappa and Mr. S. Kashinath : Secretaries; Mr. V. Sudhish Pai : Treasurer; Mr. Justice A.M. Farooq, Mr. Justice (Rtd) K. Shivashankar Bhat, Mr. M. P. Eswarappa, Mr. B.V. Acharya, Mr. K. P. Kumar, Mr. M. R. Naik, Mr. S.N. Hatti. Ms. P. G. Gouri Kuranga and Ms. Rukmini Devi : Committee members.

## Office Bearers elected

In the general body meeting of the All India Advocates Association held on 30.11.2001 at Bangalore elected the following office bearers :

President : Mr. Bhakthavachala; Vice-Presidents : Mr. Shabadin Akbar, Ms. Jayashree, Mr. K. Jesu Prasad, Mr. A.S. Jayachandra, Mr. V. Prabhakar, Mr. Subramani; General Secretary : Mr. M. Muniyappa; Joint Secretaries : Mr. C. Gandadhar, Mr. M. Mahadevaiah, Mr. Harish, Mr. D. Rajanna, Mr. E. Gopalakrishna; Organising Secretaries : Mr. H. Somashekaraiah, Mr. K. Ramashetty, Mr. A. P. Thammaiah, Mr. Subramanyam; Programme Secretary : Ms. Sathyashree; Treasurer : Mr. G. Mallikarjunappa; Executive Members : Mr. H.N. Srinivas, Mr. Kanikraj, Mr. H.R. Chandrashekar, Mr. P. Venkataramana, Mr. B.N. Krishnappa, Mr. Devadas, Mr. Subbuswamy, Mr. C. Krishnappa, Mr. R. Sarvananda, Mr. P. Vijayakumar, Mr. Amaranath Reddy, Mr. H.J. Sanghvi, Mr. M. A. Fayaz Ahmed.

## Around the Courts

☐ **Testamentary succession - uneven distribution of property by the testator, validity;**

A bench of the apex court comprising Justice R. P. Sethi and Justice Y. K. Sabharwal, has ruled that if a will left by a person distributes immovable or movable property among the children unevenly it would not render the execution of the document illegal. The judgment dated November 29, 2001 said "the uneven distribution of assets among children, by itself, cannot be taken as a circumstance causing suspicion surrounding the execution of the will. One Indirabai executed a will bequeathing bulk of her immovable property to one son; but did not give anything to her husband or widowed daughter while sharing her movable property equally among the sons. The will was challenged by one of the daughters as forged one but the court held that the execution of the will had been duly proved and dismissed the suit.

On appeal, the high court reversed the finding on the ground that "the will is most unnatural" as the more deserving widowed daughter got nothing from the testator. The apex court setaside the judgment of the high court while restoring the judgment of the trialcourt. Justice Sabharwal, speaking for the bench, said there was nothing unnatural in such uneven distribution of property and "the plaintiff cannot be permitted to urge that since nothing or almost nothing substantial was provided for her in the will. it creates suspicion about the execution of the will".

☐ **Article 30(1) of the constitution cannot be used as a shield for using education to reep huge profits;**

While quashing the complaint by a student's father against the exorbitant fees charged by an unaided minority school the

See page 3

## News Focus

☐ On 1.12.2001 Mr. Justice G. C. Bharuka addressed the members of AAB, city unit.

☐ On 7.12.2001 Mr. I.D. Inamdar, Karnataka Minister for food and civil supplies, addressed the member of AAB, city unit. Mr. Justice N.K. Jain, Chief Justice, High Court of Karnataka inagurated the programme of distribution of computerised ration cards to Advocates. Mr. K.N. Subba Reddy, President, AAB welcomed the guests.

☐ On 7.12.2001 Dr. M. Chidananda Murthy, President, Kannada Shakthi Kendra addressed the members of AAB, city unit on the subject Hindu religion and Veerashaiva.

☐ On 10.12.2001 Ms. Justice Manjula Chellur, Judge, High Court of Karnataka, inagurated the new building housing the District and sessions Judge courts at Haveri.

☐ On 14.12.2001 Mr. Justice H. Rangavittalachar, Judge High Court of Karnataka, inagurated the orientation course to civil judge (Jr. Div.) examinees conducted by AAB in a function held at new Annexe Hall in the High Court unit. Mr. K. N. Subba Reddy, President, AAB presided. Mr. L.S. Venkatakrishna, Chairman of orientation course submitted a report.

☐ On 16.12.2001 Mr. Justice M.N. Rao, former chief justice of Himachal Pradesh High Court, delivered a lecture on the topic "the backward classes and judiciary" at Kamath Yatri Nivas, Bangalore. This function was organised by Law Forum - Bangalore. The function was presided over by Prof. Ravivarmakumar, Advocate and Former chairman, Karnataka State Backward Classes commission.

## Kerala HC gets new judge

Mr. J.K. Thankappan has been appointed as an additional judge of the Kerala High Court according to an official announcement dated December 29, 2001.

## No 'mobile' Divorce

Islamic leaders in Singapore have ruled that Muslim men may not divorce their wives by sending text messages over their mobile phones.

*Courtesy :* **Manorama Year Book**

## Literary Union

☐ Under the joint auspices of Bangalore Advocates Association, Bangalore Literary Union and Bangalore Advocates Co-op. Society Ltd. Kannada Rajyotsava was celebrated at Bangalore city civil court complex. Mr. Justice K.L. Manjunath, Judge, High Court of Karnata, Mr. V. Muniyappa, Karnataka minister for mines and geology and renowned litterateur Dr. M. Chidananda Murthy addressed. The programme ended with a cultural fete.

☐ On 20.12.2001 a bharatha-natyam programme was provided by Smt. Veena Sridhar Morab and party under the joint auspices of the literary union and Directorate of Kannada and Culture, Government of Karnataka.

☐ On 23.12.2001 the literary union had organised an excussion to Krishnagiri dam and Hoganekal falls. 40 members participated in the programme.

## Kolar Diary

☐ On 2.12.2001 Mr. M.G. Amarnath, Advocate, Kolar married Ms. Bharathi at Kolar.

☐ With effect from 3.12.2001 Advocates of Chickballapur Bar are not attending courts is indefinitely on the ground that the building housing the courts is in a dilapidated and dangerous condition.

☐ In the annual general body meeting of Advocate Association Kolar held on 9.12.2001 the following members were unanimously elected as the office bearers for the year 2002.

President : N. Sampath Kumar; Vice-President : P.M. Shankar Prasad; General Secretary : T. Amarendra; Treasurer : K. Narasimha Gowda; Joint Secretary : V.M. Srinivasa Murthy; Executive Committee Members : K. M. Nagaraj, P.N. Krishna Reddy, M. Venkataramanappa, Chandrappa, R. Venkatachalapathi, M.V. Rathnamma, Zaber-Ur-Rahman, K.R. Srinivasaiah, Bisappa Gowda, B.C. Subbaraju Setty, S.R. Jagadish.

## New CJ for Bombay HC

On 31.12.2001 Justice Chunilal Karsandas Thakker was sworn in as the Chief Justice of Bombay High Court. Governor P.C. Alexander administered the oath of office to Justice Thakker at Mumbai Rajbhavan. Justice Thakker was earlier functioning as the Chief Justice of Himachal Pradesh High Court.

## Karnataka Rent Act, 1999

**A. G. Holla**, Senior Advocate

**from the last issue**

Economic Administration Reforms Commission and the National Commission on Urbanisation have recommended reform of the Rent Legislation in a way that balances the interests of both landlord and the tenant and also stimulates future construction. The Government of India have formulated a model rent control law and recommended to the State Governments to undertake amendments to existing rent control laws or enact new laws on the basis of the model law.

It is considered necessary and expedient to bring about a new legislation to provide for regulation of rent and eviction in the spirit of modern economy in a manner more suited to our state, by adopting some privisions of the model rent control law and some of the existing law of rent control in the state. Therefore it is proposed to enact new legislation to replace the existing Karnataka Rent Control Act, 1961, which is due to expire by 31.12.1999

Following are some of the features of the proposed measure :

(1) Its application is now restricted -

(i) to any residential building the standard rent of which does not exceed rupees 3,500/- per month in the areas covered by Karnataka Muncipal Corporations Act, 1976 and rupees 2,000 per month in the other areas and a commercial building having plinth area of not exceeding 14 square metres

(ii) to buildings which are more than 15 years old.

(2) The Rent Deed is required to be in writing and registered.

(3) Tenancy is made inheritable to a limited extent.

(4) Provision is made -

(a) for collection of standard rent in relation to the investment on property and for enhancement of rent, and for determination of Standard Rent by Rent Controllers;

(b) for registration of middle-men and estate agents;

(c) for adjudication of eviction application by Rent Courts, with only Right of Revision, but no appeal;

(d) for immediate eviction of tenants of State or Central Government Employees, members of Armed Forces, widows, handicapped persons and persons above the age of 65 years under certain circumstances;

(e) to lay down special procedure for trial of cases before the Controllers and also the Courts so as to achieve quick disposals and negotiated settlement.

(f) to impose certain special obligations on the landlords and tenants etc.

certain other necessary consequential and incidental provisions are also made.

8. Now we come to Chapt-VI - Regulation of eviction. Sec.27 deals with protection of tenants against eviction. 27(i) is as follows:

Notwithstanding .......... sub Sec. (2)

This is similar to S.21(1) of the old Act except the specific-ation of the adjudicating authorities. However, sub Sec.(2) of S.27 takes the place of provision to S.21(1) of the old Act. S.27(1) of new Act like S.21(1) prohibits passing of any order or decree for the recovery of possession of any premises in favour of landlord against tenant except as provided in sub Sec.2. Sec. 27(2) may be compared to the proviso to S. 21(1) of the old Act.

a. Non-payment of rent is almost similar to clause (a) of S.21 proviso of the old Act.

b. Sub-letting is equivalent to clause (f) of the old provision with a little difference in the language.

c. Using the premises for purposes other than that for which they were let without the consent in writing of landlord-similar to clause (b) of the old provision.

d. The tenant or any member of his family not being in occupation of premises for certain periods - almost similar to clause (o) of the old provision.

see page 3

## Karnataka Rent Act, 1999

from page 2

e.. The premises or part there of have become unsafe or unfit for human occupation and required by landlord for carrying out repairs or reconstruction. A portion is covered by provision (i) of the old Act.

f. Required by landlord for immediate demolition etc - similar to clause (k) & (l) of the old provision.

g. Carrying out repairs - similar to clause (i) of the old provision.

h. Premises are required for purpose of building, rebuilding etc. - more or less similar to clause (j) of old provision.

i. The premises consist of not more than 2 floors and the same are required by landlord for purpose of demolition with a view to rebuild the same. This is a new provision. Clauses e, f, g, h - the tenant shall have a right of re-entry at the new terms of tenancy in the premises at the re-built building.

j. Tenant, his spouse or dependant son or daughter aquirring vacant possession of another premises, residential or commercial, which is partially covered by clause (p) of old provision.

k. Premises let to the tenant for use as residence for being in service of or employment of the landlord & tenant has ceased to be so - similar to clause (g) of old Act.

l. Substantial alteration - clarified version of clause (c) of old provision.

m. Tenant convicted of causing nuisance - modified version of clause (d) of old provision.

n. Used contrary to condition imposed - similar to clause (b) of old provision.

o. Denial of ownership of landlord and failing to prove it.

p. Failure of a person in occupation of premises to prove that he is a bonafide tenant.

q. Tenant having agreed to vacate but fails to vacate.

r. Premises let are required for whether in the same form or after re-construction or re-building for occupation by landlord or his family. - modified and clarified version of clause (h) of old provision. There are 3 explanations added to this provision which explain the circumstances procedures and other connected matters supplementing this provision.

s. Where the landlord is a trustee of public chartiable trust which is part of clause (h) of old provision.

t. S.27 (3) deals with partial eviction in cases of clauses e, f, g, h or r of 27 (2) or S.28 to 31. The old provision (e) is not separately mentioned in the new Act. Similarly clause (m) of old provision. However S.40 of the new Act may cover clause (m) also.

9. Eventhough, I have tried to compare the new provision S.27 with old provision S.21, the various clauses which are grounds of eviction mentioned in new provision S.27(2) are largely modified and clarified in content and in certain matters simplified also. That can be seen if necessary by detailed comparison of each provision. The Sections 28 to 31 deal with certain cases of right confered on landlord to recover immediate possession of premises.

10. Sec.32 deals with restriction on sub-letting and Sec. 33 deals with notice of creation and termination of sub-tenancy and the sub-tenant to be tenant in certain cases under Sec. 34.

11. Sec. 35 deals with recovery of possession for occupation and re-entry of the tenant where he recovers possession under pursuance of clause (f) of S. 27(2) or under Ss. 28, 29, 30, 31 or 37. The period in which such possession is given is also mentioned. S. 36 deals with re-entry of the tenant. In the matters of taking possession under S. 27 (2) (h) & (i) or under Secs. 28, 29, 30, 31 or 37 and the possession of building has been taken for repairs of re-building.

to be continued

## Miscellany

☐ On 9.12.2001 Mr. P. D. Surana, Mr. H.C. Shivakumar and collegues opened their combined law chamber under the name and style of SMS Associate (Surana, Mukesh and Shivakumar) at No.9, II Floor, Kurubara Sangha Building, 2nd Main Road, Gandhinagar, Bangalore - 560 009.

☐ On 10.12.2001 Mr. H.A. Somasekharaiah and Mr. H.S. Chandraiah opened their new law chamber at No. 52/54, Chowdeswari Temple Street, Parallel to Avenue Road, Bangalore - 560 002.

☐ On 23.12.2001 Kum. Maithili D/o T.S. Mahabaleswara, Advocate, had her Bharathanatya Rangapravesha at the Ravindra Kalakshetra, Bangalore.

☐ On 22.12.2001 a consultation programme on "Poto : Problems and Challenges" was held at the venue of Student Christian Movement of India at Bangalore. The Programme was jointly organised by NCCI - Dalit and Adivasis unit and All India Advocates Association, Bangalore. Dr. I. John Mohan Razu, Professor, Department of Theology and Ethics. United Thelogical College, Bangalore, Mr. Bhaktavachala and Mr. J. Prasad, President and Vice-President of AIAA, Bangalore coordinated the programme.

## Bar Councils meet

Southern State Bar Councillors meet was held at Pondichery on 8.12.2001. Mr. Jayakumar S. Patil, former Chairman of KSBC presented a paper in the meet concerning granting of approval of affiliation of the law colleges. Mr. V. T. Rayaraddi, Chairman KSBC submitted papers on establishment of Supreme Court bench in South India, welfare measures to be adopted for Advocates, amendments to the Advocates Act, standards of legal education in the country and establishment of additional high court benches in the states.

## Women Judges

There were only 20 women judges in the Supreme Court of India and in various High Courts in May, 2001. Of the total strength of 26 judges of the Supreme Court only one was a woman. Women judges in the High courts are only 19 out of a total sanctioned strength of 647 judges in the 21 high courts.

*Courtesy :* **Manorama Year Book**

## Books Released

☐ In a function held under the auspices of AAB on 13.12.2001 Mr. Justice N. Kumar, Judge, High Court of Karnataka, released a book written in Kannada "Hasyayana" by Ms. Srilatha V. Murthy, Advocate. Renowned humourist and President Humour Club International Mr. Y.M.N. Murthy was the chief guest at the function. Mr. K. N. Subba Reddy, President, AAB presided over the function.

☐ On 21.12.2001 Mr. Justice K. L. Manjunath Judge, Karnataka High Court, released a book titled "Antharathma" (Collection of Poems in Kannada) written by Mr. B.V. Putte Gowda, Advocate and Former Mayor of Bangalore, in a function held by AAB at its high court unit. Mr. G. S. Siddalingaiah, former vice-chancellor, introduced the work. The function was presided over by Mr. K. N. Subba Reddy President AAB.

## Weddings

We are glad to inform that :

☐ On 2.12.2001 Mr. Ganapati Bhat, an Advocate from Bangalore married Ms. Soumya at Yellapur, North Karnataka.

☐ On 3.12.2001 Mr. M. G. Sateesha, an Advocate from Bangalore married Ms. B. Ramya (Roopa) at Channapatna.

☐ On 5.12.2001 Ms. K. Vidya, Advocate, married Mr. Vinit at Bangalore.

☐ On 8.12.2001 Mr. K.B. Adhyapak, an Advocate from Bangalore married Ms. Sridevi at Miraj (Maharashtra)

☐ On 9.12.2001 Mr. K. G. Krishnamurthy, an Advocate from Bangalore married Ms. Jnanada at Siddapur, North Karnataka.

## Around the courts

from page 1

Supreme Court observed, during the third week of December, 2001, that the immunity granted to the minorities cannot be a shield for using education to reep huge profits. In the context of large scale abuse of the constitutional immunity by minority run educational institutions this observation goes a long way in notifying the concerned that the immunity cannot be misused and it is not absolute.

## Congratulations



Mr. D. L. Chidananda, recently enrolled as an Advocate and presently working with Mr. Ashok Haranahalli, has many achievements to his credit. Lahari Advocates Forum congratuate him for his achievements. He passed out Law Degree from M. Krishna Law College, Hassan, in the examination held by the Mysore University in May 2001, by securing first rank. Mr. Chidananda also secured the TRA Thamboochetty Gold Medal for obtaining highest aggregate marks in the final year; Smt. Udayagiri Kamalamma Krishnamurthy Gold Medal for the highest aggregate marks in the final year; Prof. K. N. Narahari Rao Gold Medal for the highest marks in constitutional Law; M. Krishna Law College Endowment Gold Medal for highest marks in LLB examination and Dr. Channabasappa Memorial cash prize for highest aggregate marks in the final year.

## Humour in Courts

The Advocate had argued a matter for nearly an hour. The Judge finally got fed up and asked the Advocate "How can you argue such non-sense for an hour?" The Advocate replied after a moment's silence.

"I don't mind arguing non-sense for an hour but I could not stand listening to nonsense for an hour".

**Courtesy : J.G.**

## X-mas celebrated


Being the last working day before the winter vacation christmas was celebrated at the high court unit of AAB on 21.12.2001. Mr. Justice M.F. Saldanha, Judge, High Court of Karnataka who was the chief guest at the celebration spoke on the importance of the festivities and wished that the holy christmas would bring universal peace. He also wished that the members of the Bar would get rejuvenated when they resume their functions with the dawn of New Year. Choir group of New life College, Bangalore, sang christmas carols. Mr. Hiran Sircar, Pastor of First Assembly of God's Church, rendered benediction. A large number of lawyers partook in the celebrations. Mr. R. A. Devanand, Mr. B.V. Pinto and Mr. N. P. Amrutesh, Advocates, had taken initiative in organising the first ever christmas festival in the Association premises.

## Lahari Advocates Forum

On 3.12.2001 Mr. K. Ramanna, Principal City Civil and Sessions Judge, Bangalore, inagurated the VI Lahari Book Fair. Mr. K. N. SubbaReddy, President AAB, Mr. S. B. Majage, Principal District and Sessions Judge, Bangalore Rural District, Mr. Hariyappa Gowda, Principal Civil Judge (Sr. Div.), Bangalore Rural District and Mr. K. N. Keshavanarayana, Principal Judge, Court of Small Causes, Bangalore, participated in the function as guests of honour. Mr. N. Jaiprakash Rao, President, Lahari Advocates Forum welcomed the guests. Thousands of book-lovers attended the fair which went on till December 6, 2001.




Mr. Justice V. Gopalagowda, Judge, High Court of Karnataka handing over prize to a successful competitor in the recently concluded moot court competition organised by Lahari Law Academy in Bangalore. Mr. S. Vijayashankar, Trustee of the Academy and Mr. Madhumita Bagchi, the coordinator of the competition are seated.



Mr. K. Ramanna, the Principal City Civil and Sessions Judge, Bangalore is seen inagurating the VI Book Fair organised by Lahari Advocates Forum in Bangalore.

## Lahari Law Academy

On 8.12.2001 Prize distribution ceremony of the V Moot Court Competition and the validictory function of the orientation course for civil judge (Jr. Div.) examinees was held at the conference hall of the Bangalore city civil courts complex. Justice V. Gopala-gowda, Judge High Court of Karnataka, was the chief guest at the function. Mr. K. Ramanna, Principal city civil and sessions Judge, Bangalore and Mr. Y. Vasudeva, President, Bangalore Advocates Co-operative Society were the guests of honour. Number of District and Civil Judges, Advocates and students of Law colleges participated in the function. Mr. S. Vijay Shankar, Trustee, Lahari Law Academy welcomed the participants. Mr. G. Chandrasekharaiah, Secretary, Lahari Advocates Forum proposed vote of thanks.

Ms. Shilpa R. Nayak, Advocate, secured I prize for maintaining class notes while Ms. Rafia Shaheen, Advocate, Secured II prize for maintaining class notes. Mr. G.K. Manjunath, Advocate, secured the prize for best handwriting in the orientation course.

Mr. Zul-Kafeel of KLE Law College, secured I prize, Mr. Shivasankara of ULC secured IIprize, Ms. Pushpaveni of ULC secured III prize, Mr. Arun Pradesh of KLE Law College secured IV prize and Ms. T.B. Indrakala of Vivekananda Law College secured special prize in the mootcourt competition.

## Foreign Tour

Mr. S. S. Naganandа, Advocate, visited Hongkong to attend an international seminar on Information technology and legal profession held between 11 to 14 December 2001.

## Private Prison

South Korea is planning to open Asia's first private prison. The prison, to be set up by 2004, will ease overcrowding in state jails. Most of the country's 44 prisons are out dated and hold inmates 12 percent more than capacity.

**Courtesy : Manorama Year Book**

## Obituary

We regret to notify that :

- On 10.12.2001 *Gundaiah Setty* (79), Advocate, passed away at Bangalore. Gundaiah Setty was a former MLC, President of AAB during national emergency and he was the office bearer of several social organisations.
- On 12.12.2001 H.N. Srinivasa Anand, Advocate, passed away at Bangalore.
- On 14.12.2001 N.S. Krishnan (70), Advocate, passed away at Bangalore.
- On 27.12.2001 P. K. Basheer Ahmed (62), Advocate, passed away at Bangalore.
- On 31.12.2001 D.S. Lingappa (79), Advocate, passed away at Bangalore.

## State Bar Council

The State Bar Council resolved to computerise the names and particulars of Advocates enrolled with it and has published a format to be used for the purpose. Advocates are required to keep in touch with the Council with all the particulars.

**Read Communique**

Published by : Lahari Advocates Forum, No. 2980, "Laxmideep", 17th Cross, K. R. Road, BSK II Stage, Bangalore-560 070 and
Printed at : Parimala Mudranalaya, Mount Joy Extension, Hanumanthanagar, Bangalore-560 019. Phone : 6525516. Editor : K. Suryanarayana Rao

ಲಹರಿ ಸಂವಾದ

ಸಂಪುಟ ೨ | ಶಕೆ : ವಿಷುನಾಮ ಸಂವತ್ಸರ, ಮಾಸ : ಮಾರ್ಗಶಿರ | ಸಂಚಿಕೆ ೬

## ಭಯ – ಸರಳ ವಿಶ್ಲೇಷಣೆ

ಖ್ಯಾತ ನಗೆಲೇಖಕ ಡಾ|| ಶಿವರಾಂ (ರಾ.ಶಿ.)ರವರು ಉತ್ತಮ ವೈದ್ಯರೂ ಆಗಿದ್ದರು. ಮನೋವೈದ್ಯದಲ್ಲಿ ಕೂಡ ಅವರು ಪರಿಣಿತರಾಗಿದ್ದು ''ಮನೋನಂದನ'', ''ಮನಮಂಥನ''ದಂತಹ ಕೃತಿಗಳನ್ನು ರಚಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ''ಭಯ – ಸರಳ ವಿಶ್ಲೇಷಣೆ'' ಎನ್ನುವುದು ಒಂದು ಪುಟ್ಟ ಕೃತಿ. ಅದರ ಆಯ್ದ ಭಾಗವನ್ನು ಈ ಕೆಳಗೆ ಸಂವಾದ ಓದುಗರಿಗಾಗಿ ನೀಡಿದ್ದೇವೆ.

ಮನುಷ್ಯನ ಬಾಳಿನಲ್ಲಿ ಭಯವು ಬೇನೆಗಿಂತಲೂ ಹೆಚ್ಚು ಕಷ್ಟ ಕೊಡಬಹುದು. ಬೇನೆಯ ಚಿಕಿತ್ಸೆಯು ಯಶಸ್ವಿಯಾಗದಂತೆ ಪರಿಣಾಮವನ್ನು ಮಾಡಬಹುದು. ಹಾಗೂ 'ಭಯ' ವಿಲ್ಲದಿದ್ದರೆ ದುಷ್ಪರಿಣಾಮಗಳನ್ನು ತಪ್ಪಿಸಲೂ ಸಾಧ್ಯ ಎಂಬ ಅಂಶಗಳನ್ನು ಪ್ರತಿಯೊಬ್ಬ ವೈದ್ಯನೂ ಕಲಿಯುತ್ತಾನೆ. 'ಭಯ' ಅಂದರೇನು? ಅದನ್ನು ನಿವಾರಿಸಿಕೊಳ್ಳುವುದು ಹೇಗೆ ? ವಿಶ್ಲೇಷಿಸುತ್ತಾ 'ಭಯ' ಪರಿಹಾರವನ್ನು ಕಂಡುಕೊಳ್ಳಬಹುದು.

ಗಂಟಲಿನಲ್ಲಿ ಕ್ಯಾನ್ಸರ್ ಬೆಳೆದು, ಕೀರ್ತಿಶೇಷ ಅಣ್ಣಾದೊರೈ ಅವರು, ನರಳಿ ನಿಧನರಾದರು. ತದನಂತರ ಒಂದು ತಿಂಗಳಿನಲ್ಲಿ ಸುಮಾರು ನಲವತ್ತಕ್ಕೂ ಮಿಕ್ಕ ಮಧ್ಯವಯಸ್ಕರು ''ಯಾಕೋ ಗಂಟಲಲ್ಲಿ ಒಂದು ತರಹಾ ಆಗುತ್ತಾ ಇದೆ. ನುಂಗುವುದಕ್ಕೆ ಏನೂ ಬಾಧೆಯಾಗುಲ್ಲ, ಏನೂ ಇರಲಾರದು ಅಂತ ನನಗೂ ಗೊತ್ತು, ಆದರೂ, ಯಾಕೆ ಹೀಗಾಗುತ್ತೆ ಎಂದು ಪರೀಕ್ಷೆ ಮಾಡಿ ಹೇಳ್ತೀರಾ?'' ಎಂದು ಪೀಠಿಕೆ ಹಾಕುತ್ತಾ ಪರೀಕ್ಷೆಗಾಗಿ ಬಂದಿದ್ದರು. ಸಾವಧಾನವಾಗಿ, ಅವರುಗಳಿಗೆ ನಂಬಿಕೆ ಬರುವಂತೆ, ಏನೇನೆಲ್ಲಾ ಪರೀಕ್ಷೆಗಳನ್ನು ಮಾಡಿ, ಪ್ರಯೋಗಗಳನ್ನು ಹೂಡಿ, ''ಎಲ್ಲವೂ ಆರೋಗ್ಯವಾಗಿದೆ, ಇದು ಅಣ್ಣಾದೊರೈ ತರಹದ್ದಲ್ಲ'' ಎಂದು ಹೇಳಿದಾಗ, ಅವರುಗಳ ಕಾತರದ ಮುಖವು ಹಗೂರಾಗುತ್ತಿತ್ತು. ''ಆ ಭಯವೇನೂ ಇತ್ತಿಲ್ಲ ಡಾಕ್ಟರೇ! ಆದರೂ ಎಚ್ಚರಿಕೆಯಿಂದಿರಬೇಕು ಅಂತ ನೀವೇ ಹೇಳಲಿಲ್ಲವೇ? Prevention is better than cure: A stitch in time saves nine ಅಂತ'' ಎಂದು ಜಾಣತನದಿಂದ ತಮ್ಮ ಮನಸ್ಸಿನಲ್ಲಿದ್ದ ಭಯವನ್ನು ಮುಚ್ಚಿಡುತ್ತಿದ್ದರು. ಮುಚ್ಚಿಡಲು ಪ್ರಯತ್ನಿಸುತ್ತಿದ್ದರು. ಕ್ಯಾನ್ಸರ್ ಭಯಾನಕವಾದ ರೋಗವೆಂಬುದು ದಿಟ. ಆದರೆ ಲಕ್ಷ ಜನರಲ್ಲಿ ಒಬ್ಬಿಬ್ಬರಿಗೆ ತಾಕುತ್ತದೆ. ಆದರೆ ಒಬ್ಬ ಕ್ಯಾನ್ಸರ್ ರೋಗಿಗೆ, ಕಡೆಯ ಪಕ್ಷ ನೂರು ಆರೋಗ್ಯವಾಗಿರುವವರು ''ನನಗೂ ಕ್ಯಾನ್ಸರ್ ಬಂದಿದೆಯೇ?'' ಎಂಬ ಭಯದಿಂದ ನರಳುತ್ತಾರೆ.

ಮನಸ್ಸಿನ ದುಗುಡದಿಂದ ಬ್ಲಡ್ ಪ್ರೆಷರ್ ಹೆಚ್ಚಾಗುತ್ತದೆ. ಜತೆವಯಸ್ಸಿನವನಿಗೆ ಬ್ಲಡ್ ಪ್ರೆಷರ್ ಖಾಯಿಲೆ ಬಂದಿದೆ ಎಂದು ತಿಳಿದಾಗ, ತನ್ನ ಬ್ಲಡ್‌ಪ್ರೆಷರ್ ಕೂಡ ಭಯದಿಂದ ಸ್ವಲ್ಪ ಏರುತ್ತದೆ.. ಆಗ ಪರೀಕ್ಷೆ ಮಾಡಿಸಿಕೊಂಡರೆ ಅವನ ಪ್ರೆಷರ್ ಸ್ವಲ್ಪ ಹೆಚ್ಚಾಗಿಯೇ ಇರುತ್ತದೆ. ''ನನಗೂ ಈ ದರಿದ್ರ ಬೇನೆ ಬಂತು'' ಎಂಬ ಕಾತರವು ಬ್ಲಡ್ ಪ್ರೆಷರನ್ನು ಏರಿಸಿಯೇ ಇಡುತ್ತದೆ. ಇದೊಂದು ವಿಷಚಕ್ರ. ''ಕೇವಲ ಭಯದಿಂದ ಈ ಬೇನೆಯನ್ನು ಮೇಲೆ ಹಾಕಿಕೊಳ್ಳಬಹುದು'' ಎಂದು ಸುಲಭವಾಗಿ ಸಿದ್ಧಾಂತ ಮಾಡಬಹುದು. ಬ್ಲಡ್‌ಪ್ರೆಷರ್ ವ್ಯಾಧಿ ಬಂದುಬಿಟ್ಟಿದೆ ಎನ್ನುವ ಭಯದಿಂದ ನರಳುವವರು ಸಾವಿರ ಜನರಿದ್ದರೆ, ಒಬ್ಬನು ಮಾತ್ರ ದಿಟವಾದ ಹೈ ಬ್ಲಡ್‌ಪ್ರೆಷರ್ ಖಾಯಿಲೆಯಿಂದ ನರಳುತ್ತಾನೆ.

ಯಾಕೋ ಸುಸ್ತಾಗುತ್ತದೆ ಎಂದು ಬಳಲುತ್ತ ಬಂದಾಕೆಯನ್ನು ಪರೀಕ್ಷೆ ಮಾಡಿದ ನಂತರ ''ಸ್ವಲ್ಪ ಕ್ಷಯದ ಚಿಹ್ನೆಗಳಿವೆ'' ಎಂದು ಹೇಳಿ, ''ಚಿಕಿತ್ಸೆಯನ್ನು ಮಾಡಿದರೆ ಮೂರು ತಿಂಗಳುಗಳಲ್ಲಿ ಪೂರ್ಣ ವಾಸಿಯಾಗುತ್ತದೆ'' ಎಂದು ಭರವಸೆ ಕೊಡುತ್ತೇವೆ. ಆದರೂ ಮೊದಲೆರಡು ವಾರಗಳಲ್ಲಿ ಆಕೆಯ ತೂಕವು ಗಮನೀಯವಾಗಿ ಕಡಿಮೆಯಾಗುತ್ತದೆ. ಆ ಬೇನೆಯು ಬಂದು ಗುಣವಾದವರನ್ನು ಸಾಕ್ಷಾತ್ ಕಂಡ ಮೇಲೆ, ಚಿಕಿತ್ಸೆಯು ಯಶಸ್ವಿಯಾಗುತ್ತದೆ. ತೂಕವು ಏರುತ್ತದೆ. ಕ್ಷಯದ ಭಯದಿಂದ ಮೊದಲೆರಡು ವಾರದಲ್ಲಿ ತೂಕವು ಇಳಿಯಿತು ಎಂದು ಧೈರ್ಯವಾಗಿ ಹೇಳಬಹುದು.

ಅಂದರೆ ರೋಗದ ಭಯವು ಎಷ್ಟೋ ಬಾರಿ ರೋಗಕ್ಕಿಂತಲೂ ಮಿಗಿಲಾಗಿ ಮನುಷ್ಯನನ್ನು ನರಳಿಸುತ್ತದೆ. ಸಂಕಟಪಡಿಸುತ್ತದೆ. ಭಯದ ಭಯಂಕರ ಪರಿಣಾಮಗಳಲ್ಲಿ, ವಿನಾಕಾರಣ ನರಳಿಸುವುದೂ ಮುಖ್ಯವಾದುದು.

ಸೊಟ್ಟಗಾಗಿದ್ದ ಗುಂಡು ಸೂಜಿಯನ್ನು ಶ್ರೀಮಂತ ಯುವಕನೊಬ್ಬ ಆಕಸ್ಮಿಕವಾಗಿ ನುಂಗಿದ. ಅಂತಹ ಸೂಜಿಯು ಕರುಳಿನಲ್ಲಿ ಎಲ್ಲಿಯಾದರೂ ಚುಚ್ಚಿಕೊಂಡರೆ, ನಂತರ ತಾಪತ್ರಯಗಳು ಬಹಳ. ಶಸ್ತ್ರ ಚಿಕಿತ್ಸೆಯು ಅಗತ್ಯವಾಗಬಹುದು. ಪ್ರಾಣಾಪಾಯವೂ ಉಂಟು. ಆರುಗಂಟೆಗಳಿಗೊಮ್ಮೆ ಎಕ್ಸ್‌ರೇಗಳನ್ನು ತೆಗೆಸುತ್ತಾ, ಮಲವಿಸರ್ಜನೆಯನ್ನು ಮಾಡಿದಾಗ, ಗುಂಡುಸೂಜಿ ಬಿದ್ದಿತೇ ಎಂದು ಪರೀಕ್ಷಿಸು ಎಂದು ಎಚ್ಚರಿಕೆ ಕೊಟ್ಟೆ. ನಾಲ್ಕನೆಯ ಎಕ್ಸ್‌ರೇ ಫೋಟೋದಲ್ಲಿ ಗುಂಡಸೂಜಿಯು ಕಾಣಿಸಲಿಲ್ಲ. ಅಂದರೆ ವಿಸರ್ಜನೆಯಾಗಿರಬೇಕು. ''ಮಲವನ್ನು ನೀರು ಹಾಕಿ ತೊಳೆದು ಗುಂಡುಸೂಜಿ ಇತ್ತೇ ನೋಡಿದೆಯಾ?'' ಎಂದು ಕೇಳಿದೆ. ''ಅದನ್ನೆಲ್ಲಾ ಯಾರು ಪರೀಕ್ಷೆ ಮಾಡ್ತಾರೆ ಡಾಕ್ಟರ್! ಇದ್ದರೆ ಇರುತ್ತೆ ಹೋದರೆ ಹೋಗುತ್ತೆ, ಎಕ್ಸ್‌ರೇಯಲ್ಲಿ ಹೇಗೂ ಕಾಣಿಸುತ್ತಲ್ಲ!'' ಎಂದು ಯಾವ ಆತಂಕವೂ ಇಲ್ಲದೆ ಅವ ಹೇಳಿದ. ಯಾವ ಭಯವೂ ಇತ್ತಿಲ್ಲ ಅವನಿಗೆ. ಗುಂಡುಸೂಜಿಯು ಮಲದಲ್ಲಿ ಬೀಳುತ್ತದೆ. ಮಸಲಾ ಕರುಳಿಗೆ ಸಿಕ್ಕಿಕೊಂಡರೆ, ಆಪರೇಷನ್ ಮಾಡಿ ತೆಗೆಯುತ್ತಾರೆ ಎಂದು ಅವನ ಧೈರ್ಯ. ಆ ಧೈರ್ಯದಿಂದಲೇ ಅವನ ಕರುಳುಗಳೂ ತಮ್ಮ ಪಾಡಿಗೆ ಸುಗಮವಾಗಿ ಕೆಲಸ ಮಾಡಿ, ಗುಂಡುಸೂಜಿಯನ್ನು ಹೊರಗೆ ಹಾಕಿತ್ತು. ಅವನೇನಾದರೂ ಭಯದ ಪ್ರಕೃತಿಯವನಾಗಿದ್ದರೆ ಏನಾಗಿ ಬಿಡುತ್ತೋ ಎಂಬ ಹೆದರಿಕೆಯು ಅವನ ಕರುಳನ್ನೂ ಕಿವಿಚುತ್ತಿತ್ತು. ಆಗ ಸೊಟ್ಟ ಸೂಜಿಯು ಕರುಳಿಗೆ ನೆಟ್ಟಿಕೊಳ್ಳುತ್ತಲೂ ಇತ್ತು.

ಅಂದರೆ ''ಭಯ'' ವಿರದಿದ್ದವರು ದುಷ್ಪರಿಣಾಮವಾಗಬಹುದಾದ ಬೇನೆಗಳು ಬಂದರೂ, ಸುಲಭವಾಗಿ ಗುಣ ಹೊಂದಬಹುದು ಎಂದು ನಿರ್ಧಾರ ಮಾಡಿದಂತಾಯಿತು.

ಅಂತಹ ವಿಶ್ಲೇಷಣೆಯೇ ಈ ಕಿರುಹೊತ್ತಿಗೆಯ ಧ್ಯೇಯ

## 'ನ್ಯಾಯಾಂಗ ಮತ್ತು ವಕೀಲರು ಒಂದೇ ನಾಣ್ಯದ ಎರಡು ಮುಖಗಳು'

**ನ್ಯಾಯಮೂರ್ತಿ ವಿ. ಗೋಪಾಲಗೌಡ**

ಲಹರಿ ಲಾ ಅಕಾಡೆಮಿಯು ಡಿಸೆಂಬರ್ ೮ರಂದು ನಗರದ ಸಿವಿಲ್ ನ್ಯಾಯಾಲಯಗಳ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಿವಿಲ್ ನ್ಯಾಯಾಧೀಶರ (ಕಿರಿಯ ಶ್ರೇಣಿ) ನೇಮಕಾತಿಯ ಸ್ಪರ್ಧಾಪರೀಕ್ಷೆಗಳ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮೇಲ್ಕಂಡಂತೆ ಅಭಿಪ್ರಾಯಪಟ್ಟ ನ್ಯಾಯಮೂರ್ತಿ ವಿ. ಗೋಪಾಲಗೌಡರು ನ್ಯಾಯಾಂಗದ ಒಳಿತಿಗಾಗಿ ಲಹರಿಯು ಕೈಗೊಂಡಿರುವ ಪ್ರಾಮಾಣಿಕ ಪ್ರಯತ್ನಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

''ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದು, ಹೋರಾಟದ ರೂಪುರೇಷೆಗಳನ್ನು ರೂಪಿಸಿ ಸ್ವಾತಂತ್ರ್ಯ ದೊರಕಿಸಿಕೊಟ್ಟ ಗಾಂಧೀಜಿಯಂತೆಯೇ ಸ್ವಾತಂತ್ರ್ಯಾನಂತರ 'ಭಾರತ ಜನಕೋಟಿಯ ಬೈಬಲ್' ಎಂದೇ ಹೆಸರಾದ ಸಂವಿಧಾನವನ್ನು ರಚಿಸಿ, ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕಿದ ಡಾ|| ಅಂಬೇಡ್ಕರ್ ಸಹ ವಕೀಲರ ಸಮುದಾಯದಿಂದ ಬಂದವರೆ ಎಂಬುದು ಹೆಮ್ಮೆಯ ಸಂಗತಿ'' ಎಂದರು. ''ಹೀಗೆ ಸಂವಿಧಾನ ನೀಡಿರುವ ಹಕ್ಕುಗಳು ಎಲ್ಲರಿಗೂ ಸಮಾನವಾಗಿ ದೊರಕಲು, ಶಾಸನಬದ್ಧ ಆಳ್ವಿಕೆಯನ್ನು ಎತ್ತಿ ಹಿಡಿಯಲು ವಕೀಲರ ಸಮುದಾಯ ಸದಾ ಕಾರ್ಯಪ್ರವೃತ್ತವಾಗಿರಬೇಕು ಎಂದು ನುಡಿದರು.

ದಿನಕ್ಕೆ ಹದಿನಾರು ಗಂಟೆಗಳು ಶ್ರಮವಹಿಸಿ ದುಡಿದ ತಮ್ಮ ವಕೀಲಿವೃತ್ತಿಯ ಪ್ರಾರಂಭಿಕ ದಿನಗಳನ್ನು ನೆನೆದ ನ್ಯಾಯಮೂರ್ತಿಗಳು ಪ್ರಾಮಾಣಿಕವಾಗಿ ದುಡಿಯಲು ಯುವ ವಕೀಲರಿಗೆ ಕರೆಕೊಡುತ್ತಾ ''ಕೇವಲ ಯಶಸ್ವೀ ವಕೀಲರಾದರೆ ಸಾಲದು, ಸರ್ವವಿಧದಲ್ಲೂ ಶ್ರೇಷ್ಠ ವಕೀಲರಾಗಿ (Great Lawyers) ಸಮಾಜದ ಋಣವನ್ನು ತೀರಿಸಬೇಕು, ಶೇಕಡ ೭೪ರಷ್ಟಿರುವ ಗ್ರಾಮೀಣ ಜನತೆಯ ಬದುಕಿನಲ್ಲಿ ಆಶಾದೀಪವಾಗಿ ಬೆಳಗಬೇಕೆ''ಂದು ಕಿವಿಮಾತು ಹೇಳಿದರು.

ವಕೀಲರ ಸಮುದಾಯದಿಂದ ಶ್ರೇಷ್ಠ ನ್ಯಾಯಮೂರ್ತಿಗಳು, ಚಿಂತಕರು, ಸಮಾಜ ಸುಧಾರಕರು, ದಕ್ಷ ಆಡಳಿತಗಾರರು ಬೆಳೆದು ಬಂದಿದ್ದು ಈ ಪರಂಪರೆ ಮುಂದುವರಿಯಬೇಕೆಂದು ಒತ್ತಿ ಹೇಳಿದ ನ್ಯಾಯಮೂರ್ತಿಗಳು ''ಭಾರತದ ನ್ಯಾಯಾಂಗ ವ್ಯವಸ್ಥೆ ಜಗತ್ತಿಗೇ ಮಾದರಿ'' ಎಂದು ನುಡಿಯುತ್ತಾ ''ಜೀವನ ಜೀವನಾಧಾರವನ್ನು ಒಳಗೊಂಡದ್ದು'' ಎಂಬ ಪರಿಕಲ್ಪನೆ ನಮ್ಮ ನೆಲದ್ದು ಎಂದು ನುಡಿದು 'ಲಹರಿ' ಲಾ ಅಕಾಡೆಮಿಗೆ ಮತ್ತು ಪರೀಕ್ಷಾರ್ಥಿಗಳಿಗೆ ಶುಭ ಕೋರಿದರು.

ಅಂದಿನ ಸಮಾರಂಭದಲ್ಲಿ ಅಣಕು ನ್ಯಾಯಾಲಯದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಬಹುಮಾನಗಳನ್ನೂ , ತರಬೇತಿ ಪಡೆದವರಿಗೆ ಪ್ರಮಾಣ ಪತ್ರಗಳನ್ನೂ ನೀಡಲಾಯಿತು. ಅಣಕು ನ್ಯಾಯಾಲಯದ ವರದಿಯನ್ನು ಶ್ರೀ ಅರವಿಂದ ಕುಮಾರ್ ಮತ್ತು ತರಬೇತಿ ಶಿಬಿರದ ವರದಿಯನ್ನು ನಿರ್ದೇಶಕಿ ಮಧುಮಿತ ಬಗಚಿ ಅವರು ಓದಿದರು.

ಲಹರಿ ಲಾ ಅಕಾಡೆಮಿಯನ್ನು ಉನ್ನತ ಮಾರ್ಗದಲ್ಲಿ ಮುನ್ನಡೆಸುತ್ತಿರುವ ಶ್ರೀ ವಿಜಯಶಂಕರ್, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಶ್ರೀ ಕೆ. ರಾಮಣ್ಣ, ಬೆಂಗಳೂರು ವಕೀಲರ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ವೈ. ವಾಸುದೇವ, ಹಿರಿಯ ನ್ಯಾಯಾಧೀಶರುಗಳು, ನ್ಯಾಯವಾದಿಗಳು ಮತ್ತು ಉತ್ಸಾಹಿ ಯುವ ವಕೀಲರು ಮತ್ತು ಕಾನೂನು ವಿದ್ಯಾರ್ಥಿಗಳಿಂದ ತುಂಬಿ ತುಳುಕಿದ್ದ ಸಭಾಂಗಣದಲ್ಲಿ ಉತ್ಸಾಹದಿಂದ ಓಡಾಡುತ್ತಿದ್ದ ಲಹರಿಯ ಸಕ್ರಿಯ ಕಾರ್ಯಕರ್ತರಾದ ಸರ್ವಶ್ರೀ ಜಯಪ್ರಕಾಶ್ ರಾವ್, ಸೂರ್ಯನಾರಾಯಣರಾವ್, ವಿ.ಎನ್. ಮೂರ್ತಿ, ಪ್ರಶಾಂತ್‌ಚಂದ್ರ, ಎನ್.ಎಸ್.ಎಸ್. ಗುಪ್ತ, ಕೆ. ಎಸ್. ನಾಯಕ್, ಜಿ. ಎಸ್. ನಟರಾಜನ್ ಹಾಗೂ ಇತರರು ತೆಗೆದುಕೊಂಡ ಆಸಕ್ತಿ, ಪಟ್ಟ ಶ್ರಮಕ್ಕೆ ವೇದಿಕೆ ಮತ್ತು ಸಭಾಂಗಣಗಳೆರಡರಿಂದಲೂ ಮುಕ್ತ ಪ್ರಶಂಸೆ ಹರಿದು ಬಂತು. ಒಟ್ಟಾರೆ, ಲಹರಿಯ ಮಟ್ಟಿಗೆ ಪ್ರಸಕ್ತ ವರ್ಷದ ತರಬೇತಿ ಶಿಬಿರ, ಪುಸ್ತಕ ಮೇಳ, ಅಣಕು ನ್ಯಾಯಾಲಯಗಳು ಅರ್ಥಪೂರ್ಣವಾಗಿ ನಡೆದು, ಅದಕ್ಕೆ ಕಳಶವಿಟ್ಟಂತೆ ಅದೊಂದು ಯಶಸ್ವಿಯಾಗಿ ಮುಕ್ತಾಯ ಕಂಡ ಸುಂದರ ಸಂಜೆಯ ಸಮಾರಂಭ.

ವರದಿ : **ಸೂತ್ರಧಾರ ರಾಮಯ್ಯ**

## ಧ್ಯೇಯ

ನಮ್ಮ ಗುರಿ ತೀರ ಬೇರೆಯಿದ್ದು ಒಂದು ವೈಶಿಷ್ಟ್ಯದಿಂದ ಕೂಡಿದೆ. ಪ್ರಪಂಚತ್ಯಾಗದ ಸಾಧನೆಗೆ ಇಲ್ಲಿ ಅವಕಾಶವಿಲ್ಲ. ಇದೊಂದು ಸಾಧನೆಯ ಕ್ಷೇತ್ರ. ಜೀವನದ ಇನ್ನೊಂದು ರೀತಿ–ನೀತಿಗಳ ವಿಕಾಸವೇ ಈ ಸಾಧನೆಯ ಗುರಿ. ಈ ಸಾಧನೆಯ ಕೊನೆಯಲ್ಲಿ ಜೀವನವು ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆಯಿಂದ ಪ್ರಭಾವಿತವಾಗಿ ಆಧ್ಯಾತ್ಮಿಕ ಮಹಾಜೀವನವಾಗಿ ರೂಪಾಂತರಗೊಳ್ಳುವುದು.

– **ಶ್ರೀ ಅರವಿಂದರು**

## ಸುಗಮ ಸಂಗೀತ ಕಾರ್ಯಕ್ರಮ

ತಾ. ೧೫.೧೧.೨೦೦೧ರಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರು ಲಿಟರರಿ ಯೂನಿಯನ್ನಿನ ಆಶ್ರಯದಲ್ಲಿನಗರ ಘಟಕದ ಸಭಾಂಗಣದಲ್ಲಿಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಾಂಸ್ಕೃತಿಕ ಸೌರಭದ ಪ್ರಯುಕ್ತ ಸುಗಮ ಸಂಗೀತ ಕಾರ್ಯಕ್ರಮವನ್ನು ಬೆಂಗಳೂರಿನ ಶ್ರೀಮತಿ ಶಾರದಾ ನಾಯಕ್ ಮತ್ತು ಹೇಮ ತಂಡದವರಿಂದ ಆಯೋಜಿಸಲಾಗಿತ್ತು. ಸಭೆಗೆ ಮುಖ್ಯ ಅತಿಥಿಗಳಾಗಿ ಹೈ ॥ ನ್ಯಾ॥ಗಳಾದ ಶ್ರೀ ಚಂದ್ರಶೇಖರಯ್ಯ ಮತ್ತು ನ್ಯಾ॥ ಶ್ರೀ ಗುರುರಾಜನ್ ರವರು ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ವೆಂಕಟರೆಡ್ಡಿಯವರು ವಹಿಸಿದ್ದರು. ಸಂಘದ ಇತರ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು॥ ನಾಗರತ್ನರವರ ಪ್ರಾರ್ಥನೆ ಯೊಂದಿಗೆ ಆರಂಭಗೊಂಡ ಸಭೆ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟರೆಡ್ಡಿಯವರು ಸ್ವಾಗತಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸಂಘದ ಕಾರ್ಯದರ್ಶಿಗಳಾದ ಶ್ರೀ ನಾರಾಯಣ್‌ರವರು ನಿರ್ವಹಿಸಿದರು.

ಶ್ರೀಮತಿ ಶಾರದಾ ನಾಯಕ್‌ರವರಿಂದ ''ಗಜವದನ ಬೇಡುವೆ'' ಹಾಡಿನಿಂದ ಆರಂಭಗೊಂಡ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಈ ತಂಡದಿಂದ ಹಲವಾರು ಶಾಸ್ತ್ರೀಯ ಹಾಗೂ ಭಕ್ತಿಗೀತೆಗಳು ಮೂಡಿಬಂದು ಸಭಿಕರನ್ನು ಸಂಗೀತ ಸುಧೆಯಲ್ಲಿ ಮುಳುಗಿಸಿತು. ತಂಡದ ಕೊಳಲು ವಾದಕರು ತಮ್ಮ ಅತ್ಯುತ್ತಮ ಪ್ರತಿಭೆಯಿಂದ ಸಭಿಕರ ಗಮನ ಸೆಳೆದರು.

ಎಸ್. ಗೋಪಾಲ್

## ವರದಕ್ಷಿಣೆ

ವರದಕ್ಷಿಣೆ, ವರದಕ್ಷಿಣೆ
ಎಲ್ಲೆಲ್ಲೂ ವರದಕ್ಷಿಣೆ
ವರಗಳಿಗೆ ದಕ್ಷಿಣೆ
ವಧುಗಳ ಶೋಷಣೆ

ಕನ್ಯಾಪಿತೃರ ಪ್ರದಕ್ಷಿಣೆ
ವರಗಳ ಸಂಶೋಧನೆ
ಶಕ್ತಿಗೆ ಮೀರಿದ ಸಂಭಾವನೆ
ನೀಡುವುದೆಂತು ವರನಿಗೆ ?

ಬಂದನೊಬ್ಬ ವರ ಸುಮ್ಮನೆ
ಕೇಳದೆ ಏನನೂ ಮೆಚ್ಚಿದ ಹೆಣ್ಣನು
ಆದರೇನಾಯ್ತು ಪ್ರಯೋಜನ ?
ಕನ್ಯಾಪಿತೃಗೆ ವರನಮೇಲನುಮಾನ !

ವರದಕ್ಷಿಣೆಯ ಈ ಎರಡು ಮುಖದಲೂ
ಬಲಿಯಾಗುವವಳು ಹೆಣ್ಣಲ್ಲವೇ?
ತಿಳಿದೂ ಇದ ಮಾಡುವುದು ತಪ್ಪಲ್ಲವೇ?
ಹೇಳುವುದ್ಯಾರಿಗೆ ತಿಳಿಯಲಿಲ್ಲವೇ?

ಮಹಿಳಾ ಸಂಘಗಳ ಪ್ರಯತ್ನ
ಕಾನೂನು ಕಾಯಿದೆಗಳ ಆಗಮನ
ಎಲ್ಲೆಲ್ಲೂ ಘೋಷಣೆ, ಭಾಷಣ
ಕಥೆ, ವಾರ್ತೆ, ದೂರದರ್ಶನ
ಧಾರಾವಾಹಿ, ಸಂದರ್ಶನ

ಆದರೂ ನಿಲ್ಲದು ವರದಕ್ಷಿಣ
ನಿತ್ಯ ನಿರಂತರ ಘರ್ಷಣ
ವಧುಗಳ ಆತ್ಮಸಮರ್ಪಣ
ಮಾತಾಪಿತರ ಅಶ್ರುತರ್ಪಣ

ಭವಾನಿ ವೇಣುಗೋಪಾಲ್

## ಓದುಗರ ಪತ್ರ

ಮಾನ್ಯರೆ,

ಕನ್ನಡದಲ್ಲಿ ''ಲಹರಿ ಸಂವಾದ'' ಸುದ್ದಿಪತ್ರ ಬರುತ್ತಿರುವುದು ಸಂತಸದ ಸಂಗತಿ. ಬೆಂಗಳೂರು ವೃತ್ತಿ ವಕೀಲರ ಕಾರ್ಯಚಟುವಟಿಕೆಗಳನ್ನು ತಿಳಿಯಲು ಮತ್ತು ಅನಿಸಿಕೆಗಳ ವಿನಿಮಯ ಮಾಡಿಕೊಳ್ಳಲು ಇದೊಂದು ವೇದಿಕೆಯಾಗಲೆಂದು ನನ್ನ ಆಶಯ.

ಎಸ್. ಗೋಪಾಲ್‌ರವರ ಸುದ್ದಿ ನಿರೂಪಣಾ ಶೈಲಿ ಚೆನ್ನಾಗಿದೆ. ಅಂತೆಯೇ, ಸುದ್ದಿ ಪತ್ರದ ಪ್ರಕಟಣೆಗೆ ಲಹರಿ ಸಂಸ್ಥೆ ಬೆಂಬಲವಾಗಿ ನಿಂತಿರುವುದು ಮೆಚ್ಚುಗೆಯ ಮತ್ತು ಅಭಿನಂದನೀಯ ಕೆಲಸವಾಗಿದೆ.

ಪ್ರೀತಿಯೊಂದಿಗೆ
ರಮೇಶ್ ಬಾಬು

# ಸಾಕ್ಷ್ಯ ನಾಶಪಡಿಸುವುದು ಗಂಭೀರ ಅಪರಾಧ

ಭಾರತ ದಂಡ ಸಂಹಿತೆಯ ಕಲಂ ೧೯೬ರನ್ವಯ ಯಾವನೇ ವ್ಯಕ್ತಿಯು ತಿಳಿದೂ ತಿಳಿದೂ ಸುಳ್ಳು ಸಾಕ್ಷ್ಯವನ್ನು ನಿಜವಾದ ಸಾಕ್ಷ್ಯ ಎಂದು ದುರುಪಯೋಗ ಮಾಡಲು ಹೊರಟರೆ ಅಂತಹ ವ್ಯಕ್ತಿಗೆ ಸುಳ್ಳುಸಾಕ್ಷ್ಯ ಅಥವಾ ಸುಳ್ಳು ದಾಖಲೆ ತಯಾರಿಸಿದ ಕೃತ್ಯಕ್ಕೆ ಯಾವ ಶಿಕ್ಷೆಯನ್ನು ಕೊಡಲಾಗುತ್ತದೆಯೋ ಅದೇ ಶಿಕ್ಷೆಯನ್ನೇ ಕೊಡಬಹುದಾಗಿದೆ.

ಭಾರತ ದಂಡ ಸಂಹಿತೆಯ ಕಲಂ ೧೯೭ರನ್ವಯ ಯಾವನಾದರೂ ಒಬ್ಬ ವ್ಯಕ್ತಿಯು ಸುಳ್ಳು ಸರ್ಟಿಫಿಕೇಟ್ ಕೊಟ್ಟಲ್ಲಿ ಅಂತಹ ವ್ಯಕ್ತಿಗೆ ಸುಳ್ಳು ದಾಖಲೆ ಕೊಡುವ ಅಪರಾಧಕ್ಕೆ ಯಾವ ಶಿಕ್ಷೆ ಕೊಡುತ್ತಾರೋ ಅದನ್ನೇ ಕೊಡಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವ ಸರ್ಟಿಫಿಕೇಟ್ ಕೊಡಲಾಗುತ್ತದೋ ಆ ಸರ್ಟಿಫಿಕೇಟ್ ಕಾನೂನಿನನ್ವಯ ಸಾಕ್ಷ್ಯ ಎಂದು ಒಪ್ಪತಕ್ಕದ್ದಾಗಿರಬೇಕು. ಅಂದರೆ ಆ ಸರ್ಟಿಫಿಕೇಟ್ ಅನ್ವಯ ಯಾವುದಾದರೂ ಒಂದು ಲಾಭ ಅಥವಾ ನಷ್ಟ ಉಂಟಾಗಿರುವಂತದ್ದಾಗಿರಬೇಕು. ಅದೇ ರೀತಿ ಭಾರತ ದಂಡ ಸಂಹಿತೆಯ ಕಲಂ ೧೯೮ರಲ್ಲಿ ತಿಳಿಸುವುದೇನೆಂದರೆ ಯಾವನೇ ಒಬ್ಬ ವ್ಯಕ್ತಿಯು ಸುಳ್ಳು ಸರ್ಟಿಫಿಕೇಟ್ ಎಂದು ಗೊತ್ತಿದ್ದೂ ಅದನ್ನು ನಿಜವಾದ ಸರ್ಟಿಫಿಕೇಟ್ ಎಂದು ಉಪಯೋಗ ಮಾಡಲು ಹೊರಟರೆ ಅಂತಹ ವ್ಯಕ್ತಿಗೆ ಸುಳ್ಳು ಸಾಕ್ಷ್ಯಕ್ಕೆ ಕೊಡುವುದಕ್ಕೆ ಯಾವ ಶಿಕ್ಷೆ ವಿಧಿಸಲಾಗುತ್ತದೋ ಅದೇ ಶಿಕ್ಷೆಯನ್ನೇ ವಿಧಿಸಲಾಗುವುದು.

ನ್ಯಾಯಾಲಯದಲ್ಲಿ ಶಿಕ್ಷೆಗೆ ಒಳಗಾಗಬಹುದು ಹಾಗೂ ಕ್ರಿಮಿನಲ್ ಕೇಸ್‌ಗಳಲ್ಲಿ ಸಿಕ್ಕಿಹಾಕಿಕೊಳ್ಳಬಹುದು ಎನ್ನುವ ಕಾರಣದಿಂದ ಹಲವಾರು ಜನ ಒಂದು ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ನಾಶ ಮಾಡಲು ಅನುವಾಗುತ್ತಾರೆ. ಉದಾಹರಣೆಗೆ – ಒಬ್ಬ ಕೊಲೆಗಾರ ತನ್ನ ರಕ್ತಹತ್ತಿದ ಬಟ್ಟೆಯನ್ನು ಸುಟ್ಟುಹಾಕಿ ಬಿಡಬಹುದು. ಅದೇ ರೀತಿ ಒಬ್ಬ ಗಂಡ ತನ್ನ ಹೆಂಡತಿಯನ್ನು ಕೊಲೆ ಮಾಡಿ ಆಕೆಯ ಕೊಲೆ ಬಗ್ಗೆ ಜನರಿಗೆ ತಿಳಿಯಬಾರದು ಎಂದು ಅವಳ ದೇಹವನ್ನು ದೂರದ ಜಾಗಕ್ಕೆ ಕೊಂಡೊಯ್ದು ಅದನ್ನು ಸುಟ್ಟು ಹಾಕಬಹುದು. ಪ್ರಕರಣಗಳ ತನಿಖೆಗೆ ಬೇಕಾದ ದಾಖಲೆಗಳನ್ನು ಹರಿದು ಬಿಸಾಕಿ ನಷ್ಟ ಮಾಡಬಹುದು. ಹೀಗೆ ತಾವು ಅಪರಾಧದಲ್ಲಿ ಸಿಕ್ಕಿ ಹಾಕಿಕೊಳ್ಳಬಹುದು ಎಂದು ಅಪರಾಧಕ್ಕೆ ಸಂಬಂಧಿಸಿದ ಅಂದರೆ ಸಾಕ್ಷ್ಯ ಎಂದು ಪರಿಗಣಿಸಲ್ಪಡುವ ದಾಖಲೆಗಳನ್ನು ನಾಶ ಮಾಡಲು ಹೊರಡುವುದು ಸರ್ವೇಸಾಮಾನ್ಯ. ಇಂತಹ ಕೃತ್ಯಗಳನ್ನು ನಮ್ಮ ಕಾನೂನು ಗಂಭೀರವಾಗಿ ಪರಿಗಣಿಸಿದ್ದು ಸಾಕ್ಷ್ಯಾಧಾರದ ನಾಶಕ್ಕೆಂದೇ ಕಲಂ ೨೦೧ನ್ನು ಭಾರತ ದಂಡ ಸಂಹಿತೆಯಲ್ಲಿ ರೂಪಿಸಿದೆ.

ಈ ಕಲಂ ಅನ್ವಯ ಯಾವನೇ ಒಬ್ಬ ವ್ಯಕ್ತಿಯು ಒಂದು ಅಪರಾಧ ಘಟಿಸಿದೆ ಎನ್ನುವ ಜ್ಞಾನವನ್ನು ಹೊಂದಿದ್ದು ಅಥವಾ ಅಪರಾಧ ಘಟಿಸಿದೆ ಎಂದು ನಂಬಿದ ಬಳಿಕ ಸದರಿ ಅಪರಾಧಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ಸಾಕ್ಷ್ಯವನ್ನು ನಾಶಪಡಿಸಿದರೆ ಆತ ಶಿಕ್ಷಾರ್ಹನಾಗುತ್ತಾನೆ. ಅದೇ ರೀತಿ ಯಾವುದಾದರೂ ಒಂದು ಅಪರಾಧದ ಬಗ್ಗೆ ತಿಳಿದಿದ್ದೂ ಅದರ ಬಗ್ಗೆ ಸುಳ್ಳು ಮಾಹಿತಿ ನೀಡಿದರೆ ಆಗಲೂ ಆತ ಶಿಕ್ಷಾರ್ಹ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಕ್ಷ್ಯವನ್ನು ನಾಶಪಡಿಸುವುದು ಹಾಗೂ ಅಪರಾಧದ ಬಗ್ಗೆ ಸುಳ್ಳು ಮಾಹಿತಿ ಕೊಡುವುದು ಇವೆರಡರ ಉದ್ದೇಶವೂ ಯಾವ ವ್ಯಕ್ತಿಯು ಅಪರಾಧವನ್ನು ಮಾಡಿರುತ್ತಾನೋ ಆ ವ್ಯಕ್ತಿಗೆ ಕಾನೂನಿನಿಂದ ಬಚಾವು ಮಾಡುವುದಾಗಿರಬೇಕು. ಅಥವಾ ರಕ್ಷಣೆ ಮಾಡುವುದಾಗಿರಬೇಕು. ಆ ಉದ್ದೇಶ ಇಟ್ಟುಕೊಂಡು ಸಾಕ್ಷ್ಯ ನಾಶಪಡಿಸಿದರೆ ಮಾತ್ರ ಕಲಂ ೨೦೧ ಜಾರಿಗೆ ಬರುತ್ತದೆಯೇ ಹೊರತು ಇಲ್ಲದಿದ್ದರೆ ಇಲ್ಲ.

ಕಲಂ ೨೦೧ರಲ್ಲಿ ಮೂರು ಸಂದರ್ಭಗಳನ್ನು ವಿವರಿಸಲಾಗಿದೆ. ಆ ಸಂದರ್ಭಗಳು ಯಾವ ಅಪರಾಧದ ಸಾಕ್ಷ್ಯವನ್ನು ಮುಚ್ಚಲಾಗುತ್ತದೋ ಅಂತಹ ಅಪರಾಧಕ್ಕೆ ಸಂಬಂಧಪಟ್ಟದ್ದಾಗಿದೆ. ಒಂದು ವೇಳೆ ಅಪರಾಧವು ಮರಣದಂಡನೆಗೆ ಶಿಕ್ಷೆ ವಿಧಿಸಬಹುದಾದಂತಹ ಅಪರಾಧವಾಗಿದ್ದು (ಉದಾಃ ಕೊಲೆ) ಈ ಅಪರಾಧಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ಹಾಳು ಮಾಡಿದರೆ ಅಥವಾ ಸುಳ್ಳು ಮಾಹಿತಿ ನೀಡಿದರೆ ಅಂತಹ ವ್ಯಕ್ತಿಗೆ ಏಳು ವರ್ಷಗಳ ಕಾಲ ಜೈಲಿಗೆ ಕಳುಹಿಸಿ ಜುಲ್ಮಾನೆಯನ್ನೂ ಹಾಕಬಹುದಾಗಿದೆ.

ಒಂದು ವೇಳೆ ಅಪರಾಧವು ಜೀವಾವಧಿ ಶಿಕ್ಷೆ ಕೊಡಬಹುದಾದಂತಹ ಅಪರಾಧವಾಗಿದ್ದು ಅಥವಾ ಹತ್ತು ವರ್ಷಗಳವರೆಗೆ ಜೈಲಿಗೆ ಕಳುಹಿಸಬಹುದಾದಂತಹ ಅಪರಾಧವಾಗಿದ್ದು ಅಂತಹ ಅಪರಾಧದ ಬಗ್ಗೆ ಸಾಕ್ಷ್ಯವನ್ನು ಹಾಳು ಮಾಡಿದರೆ ಆ ವ್ಯಕ್ತಿಗೆ ಮೂರು ವರ್ಷಗಳ ಕಾಲ ಕಾರಾಗೃಹವಾಸ ವಿಧಿಸಿ ದಂಡವನ್ನೂ ಹಾಕಬಹುದಾಗಿದೆ.

ಒಂದು ವೇಳೆ ಘಟಿಸಿದ ಅಪರಾಧಕ್ಕೆ ಹತ್ತು ವರ್ಷಕ್ಕಿಂತ ಕಡಿಮೆ ಜೈಲು ವಾಸ ನಮೂದು ಆಗಿದ್ದರೆ ಆ ಅಪರಾಧದ ಸಾಕ್ಷ್ಯವನ್ನು ಹಾಳು ಮಾಡಿದ ವ್ಯಕ್ತಿಗೆ ಅಪರಾಧಕ್ಕೆ ಎಷ್ಟು ಶಿಕ್ಷೆಯನ್ನು ವಿಧಿಸಲಾಗುತ್ತದೋ ಅದರ ಕಾಲು ಭಾಗದಷ್ಟು ಶಿಕ್ಷೆಯನ್ನು ಕೊಡಬಹುದಾಗಿದೆ. ಕಾನೂನಿನ ಉದ್ದೇಶದಂತೆ ಅಪರಾಧ ತೀವ್ರವಾಗುತ್ತ ಹೋದಂತೆಲ್ಲಾ ಸಾಕ್ಷ್ಯವನ್ನು ಮುಚ್ಚಿಡುವುದಕ್ಕೆ ಕೊಡುವ ಶಿಕ್ಷೆ ತೀವ್ರವಾಗುತ್ತಲೇ ಹೋಗುತ್ತದೆ.

ಭಾರತ ದಂಡ ಸಂಹಿತೆಯ ಕಲಂ ೨೦೨ರಲ್ಲಿ ಬೇಕೆಂತಲೇ ಮಾಹಿತಿಯನ್ನು ಮುಚ್ಚಿಟ್ಟುಕೊಳ್ಳುವುದರ ಬಗ್ಗೆ ವಿವರಣೆ ನೀಡಲಾಗಿದೆ. ಯಾವನಾದರೂ ವ್ಯಕ್ತಿಗೆ ಅಪರಾಧವೊಂದು ಆದ ಬಗ್ಗೆ ಮಾಹಿತಿ ಬಂದ ನಂತರ ಆ ವ್ಯಕ್ತಿಯು ಬೇಕೆಂತಲೇ ಆ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸದಿದ್ದರೆ ಅವನಿಗೆ ಆರು ತಿಂಗಳ ಕಾಲ ಜೈಲು ಶಿಕ್ಷೆ ಕೊಡಬಹುದು. ಇಲ್ಲಿ ಮುಖ್ಯವಾದ ಅಂಶವೆಂದರೆ ಯಾವ ವ್ಯಕ್ತಿಯು ಅಪರಾಧದ ಬಗ್ಗೆ ಮಾಹಿತಿ ನೀಡುವುದಿಲ್ಲವೋ ಅಂತಹ ವ್ಯಕ್ತಿಗೆ ಕಾನೂನಿನ ಅನ್ವಯ ಅಂತಹ ಮಾಹಿತಿಯನ್ನು ನೀಡಲೇಬೇಕು ಎಂದು ನಿರ್ಬಂಧ ಇರಬೇಕು. ಉದಾಹರಣೆಗೆ – ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ತನ್ನ ಎದುರಿಗೆ ಆದಂತಹ ಕಳ್ಳತನದ ಬಗ್ಗೆ ಸಂಬಂಧಿಸಿದ ಪೋಲೀಸ್ ಠಾಣೆಗೆ ಮಾಹಿತಿ ಕೊಡಬೇಕು. ಅದು ಕಾನೂನು ಅಲಿವನ ಮೇಲೆ ಹೊರಿಸಿರುವ ಕರ್ತವ್ಯ. ಆದರೆ ಅವನು ಕರ್ತವ್ಯವನ್ನು ಮುರಿದು ಬೇಕೆಂತಲೇ ಮಾಹಿತಿಯನ್ನು ಮುಚ್ಚಿಟ್ಟುಕೊಂಡರೆ ಅವನಿಗೆ ಕಲಂ ೨೦೨ರನ್ವಯ ಶಿಕ್ಷೆ ವಿದಿಸಬಹುದು. ಹಲವಾರು ಸಂದರ್ಭಗಳಲ್ಲಿ ಕೆಲವು ವ್ಯಕ್ತಿಗಳು ಒಂದು ದಾಖಲೆಯನ್ನು ಸಾಕ್ಷಿಯಾಗಿ ನ್ಯಾಯಾಲಯದಲ್ಲಿ ಹಾಜರುಪಡಿಸಬಾರದೆಂಬ ದುರುದ್ದೇಶ ಇಟ್ಟುಕೊಂಡು ಆ ದಾಖಲೆ ಹಾಳು ಮಾಡಿಬಿಡುತ್ತಾರೆ.

ಎಷ್ಟೋ ಬಾರಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದಾಗ ಕೆಲವು ವ್ಯಕ್ತಿಗಳು ಬೇಕೆಂತಲೇ ಇನ್ನೊಬ್ಬರಂತೆ ಸೋಗು ಹಾಕಿಕೊಂಡು ನ್ಯಾಯಾಲಯದಲ್ಲಿ ಸಾಕ್ಷಿ ಕೊಡಬಹುದು.

ಅದೇ ರೀತಿ ಯಾವನಾದರೂ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ತೊಂದರೆ ಕೊಡುವ ಉದ್ದೇಶದಿಂದ ದುರುದ್ದೇಶ ಪೂರ್ವಕವಾಗಿ ನ್ಯಾಯಾಲಯದಲ್ಲಿ ತನಗೆ ಸೇರಿರದೇ ಇರುವ ವಸ್ತುವನ್ನು ತನ್ನದು ಎನ್ನುವ ರೀತಿಯಲ್ಲಿ ಹೇಳಿಕೆ ಕೊಟ್ಟರೆ ಅವನಿಗೆ ಐ.ಪಿ.ಸಿ. ಕಲಂ ೨೦೯ರನ್ವಯ ಎರಡು ವರ್ಷಗಳ ಕಾಲ ಜೈಲಿಗೆ ಕಳುಹಿಸಬಹುದು.

ಹಲವಾರು ಬಾರಿ ಸಾರ್ವಜನಿಕರು ಇನ್ನೊಬ್ಬರಿಗೆ ತೊಂದರೆ ಆಗಲಿ ಎನ್ನುವ ದುರುದ್ದೇಶದಿಂದ ಬೇರೊಬ್ಬರ ಮೇಲೆ ಸುಳ್ಳು ಕೇಸ್ ಹಾಕುತ್ತಾರೆ. ಅಂತಹ ಸುಳ್ಳು ಕೇಸಿನ ಉದ್ದೇಶ ಯಾರ ಮೇಲೆ ಆರೋಪ ಮಾಡಲಾಗುತ್ತದೆಯೋ ಅವರಿಗೆ ಪೋಲೀಸರು ಬಂಧಿಸಿ ತೊಂದರೆ ಕೊಡಲಿ ಎನ್ನುವುದಾಗಿರುತ್ತದೆ. ಈ ರೀತಿ ಯಾವನಾದರೂ ವ್ಯಕ್ತಿ ದುರುದ್ದೇಶದಿಂದ ನಿರಪರಾಧಿಯು ಅಪರಾಧ ಮಾಡಿದ್ದಾನೆಂದು ಸುಳ್ಳನ್ನು ಹೇಳಿ ಆ ಸುಳ್ಳಿನ ಪ್ರಭಾವದಿಂದ ಯಾವುದಾದರೂ ಒಂದು ತನಿಖೆ ಆಗುವುದಕ್ಕೆ ಕಾರಣೀಭೂತನಾದರೆ ಅಂತಹ ವ್ಯಕ್ತಿಗೆ ಎರಡು ವರ್ಷಗಳವರೆಗೆ ಜೈಲಿಗೆ ಕಳುಹಿಸಿ ಜುಲ್ಮಾನೆಯನ್ನೂ ಹಾಕಬಹುದಾಗಿದೆ.

ಒಂದು ವೇಳೆ ಮರಣದಂಡನೆ ವಿಧಿಸಬಹುದಾದ ಅಪರಾಧವನ್ನು ಮಾಡಿದ್ದಾನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಬಹುದಾದಂತಹ ಅಪರಾಧವನ್ನು ಮಾಡಿದ್ದಾನೆಂದು ಒಬ್ಬ ನಿರಪರಾಧಿ ವ್ಯಕ್ತಿಯ ಮೇಲೆ ಸುಳ್ಳು ಆರೋಪ ಹೊರಿಸಿ ಆ ಆರೋಪದ ಫಲವಾಗಿ ಆ ನಿರಪರಾಧಿಗೆ ತೊಂದರೆಯನ್ನು ಕೊಟ್ಟರೆ ಯಾವನು ಸುಳ್ಳು ಆರೋಪ ಮಾಡಿರುತ್ತಾನೋ ಅಂತಹ ವ್ಯಕ್ತಿಗೆ ಏಳು ವರ್ಷಗಳ ಕಾಲ ಕಾರಾಗೃಹವಾಸವನ್ನು ವಿಧಿಸಬಹುದಾಗಿದೆ. ಈ ಕಲಂನ ಉದ್ದೇಶ ಸುಳ್ಳು ಮಾಹಿತಿ ನೀಡಿ ಕಾನೂನು ಪ್ರಕ್ರಿಯೆಯನ್ನು ಪ್ರಾರಂಭಿಸಿ ತಮಗಾಗದವರ ಮೇಲೆ ಸೇಡು ತೀರಿಸಿಕೊಳ್ಳುವುದನ್ನು ತಡೆಯಲು ಎಂದಾಗಿದೆ. ಆದರೆ ದುರದೃಷ್ಟವಶಾತ್ ಬಹಳ ಜನ ಇಂದಿಗೂ ಸುಳ್ಳು ಮಾಹಿತಿ ನೀಡಿ ಕಾನೂನನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

–ಆಧಾರ

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ಸಂ. ೨೮೮೦ ''ಲಕ್ಷ್ಮೀದೀಪ್'', ೧೧ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦೦೫೦. ಮುದ್ರಕರು : ಪರಿಮಳ ಮುದ್ರಣಾಲಯ ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು–೫೬೦೦೧೯, ದೂರವಾಣಿ : ೬೫೨೫೫೧೬. ಸಂಪಾದಕರು : ಜಿ. ಎಸ್. ನಟರಾಜನ್, ಸಹ ಸಂಪಾದಕರು : ವಿ. ಎನ್. ಮೂರ್ತಿ